ಸೆಲೆಬ್ರಿಟಿ

■ ಹನಿ

## ಸಂಜಯನ ಜೈಲು ಶಿಕ್ಷೆ



ಸಿನಿಮಾ ತಾರೆಯರು ಜೈಲಿನ ಹೊರಗಿದ್ದರೂ ಸುದ್ದಿ, ಒಳಗಿದ್ದರೂ ಸುದ್ದಿಯೇ. ಈ ವರ್ಷದ ಜುಲೈ 29ಕ್ಕೆ ಸಂಜಯ್ ದತ್‌ಗೆ 54 ವರ್ಷ ತುಂಬುತ್ತದೆ. ಈ ವಯಸ್ಸಿನಲ್ಲಿ ಜೈಲು ಪಾಲಾಗಿರುವುದು ಕಷ್ಟವೇ. 21 ವರ್ಷಗಳ ಹಿಂದೆ ಮನೆಯಲ್ಲಿ ಏಕೆ 56 ಮತ್ತು 9 ಎಂಎಂ ಪಿಸ್ತೂಲ್ ಇಟ್ಟುಕೊಂಡು ಮೆರೆದದ್ದಕ್ಕೆ ಸಂಜಯ್ ದತ್ ಈಗ ಜೈಲು ಹಕ್ಕಿ. 1993ರ ಮುಂಬೈ ಸರಣಿ ಬಾಂಬ್ ಸ್ಫೋಟಕ್ಕೆ ಕಾರಣರಾದವರ ಜತೆ ಸಂಜಯ್ ದತ್ ಹೊಂದಿದ್ದ ಸ್ನೇಹ ಮತ್ತು ಅವರಿಂದಲೇ ಅಕ್ರಮವಾಗಿ ಏಕೆ 56 ಖರೀದಿಸಿದ್ದು ದತ್‌ನನ್ನು ಜೀವನದ ಸಂಧ್ಯಾಕಾಲದಲ್ಲಿ ಹಣ್ಣಾಗಿಸಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ಸಂಜಯ್ ಜೈಲು ಸೇರಿದ್ದು. ಸುಮಾರು 9 ತಿಂಗಳಿಂದ ಜೈಲುವಾಸ. ಆದರೆ ಈ 9 ತಿಂಗಳಲ್ಲಿ ಸುಮಾರು 4 ತಿಂಗಳ ಕಾಲ ಸಂಜಯ್ ದತ್ ಜೈಲಿನಿಂದ ಹೊರಗೇ ಇದ್ದಾನೆ ಎನ್ನುವುದೇ ಈಗ ದೊಡ್ಡ ಸುದ್ದಿ!

ಐದು ವರ್ಷದ ಜೈಲು ಶಿಕ್ಷೆ ಅನುಭವಿಸುತ್ತಿರುವ ಸಂಜಯ್ ದತ್, ಈಗಾಗಲೇ ಮೂರು ಸಲ ಪರೋಲ್ ಮೇಲೆ ಹೊರಗೆ ಬಂದಿದ್ದಾನೆ. ಎರಡು ಸಲ ಸ್ವಂತ ಅನಾರೋಗ್ಯದ ಕಾರಣವಾದರೆ, ಇನ್ನೊಂದು ಸಲ ಹೆಂಡತಿ ಮಾನ್ಯತಾಳ ಅನಾರೋಗ್ಯದ ಕಾರಣ ನೀಡಿದ್ದಾನೆ. ಮಾನ್ಯತಾಗೆ ಹೃದಯ ಕಾಯಿಲೆ ಮತ್ತು ಲಿವರ್ ಪ್ರಾಬ್ಲಂ ಇದೆ; ಆಪರೇಷನ್ ಆಗಿದೆ ಎಂದು ಸಂಜಯ್ ಜೈಲಿನಿಂದ ಮನೆಗೆ ಬಂದ ಬೆನ್ನಲ್ಲೇ ಮಾನ್ಯತಾ ಸಿನಿಮಾ ಬಿಡುಗಡೆಯೊಂದರ ಸಮಾರಂಭ ಮತ್ತು ಪಾರ್ಟಿಯಲ್ಲಿ ಭಾಗವಹಿಸಿದ ಫೋಟೋಗಳು ಟೀವಿಯಲ್ಲಿ ಬಂದವು! ರಾಜ್ಯ ಸರಕಾರ ಸುಳ್ಳೇ ಸಂಜಯ್ ದತ್‌ಗೆ ಜೈಲಿನಿಂದ ಹೊರಕ್ಕೆ ಕಳುಹಿಸುತ್ತಿದೆ ಎನ್ನುವ ಗುಲ್ಲು ಎದ್ದು ಅದರ ತನಿಖೆಗೆ ರಾಜ್ಯ ಸರಕಾರ ಈಗ ಆದೇಶ ನೀಡಿದೆ.

ಸಂಜಯ್ ಸೋದರಿ ಪ್ರಿಯಾ ದತ್ ಕಾಂಗ್ರೆಸ್‌ನಿಂದ ಎಂ ಪಿ ಆಗಿರುವುದೇ ಈ ಹಗರಣಕ್ಕೆ ಕಾರಣ ಎನ್ನುವುದು ಸುದ್ದಿ ಮಾಧ್ಯಮಗಳ ಗುದ್ದು. ಮುಂಬೈ ಹೈಕೋರ್ಟ್ ಕೂಡಾ ಈ ಬಗ್ಗೆ ಕಿಡಿ ಕಾರಿದ್ದು, ಪರೋಲ್ ಮೇಲೆ ಕೈದಿಗಳನ್ನು ಬಿಡುವಾಗ ರಾಜ್ಯ ಸರಕಾರ ವಿವೇಚನಾ ಅಧಿಕಾರವನ್ನು ಸರಿಯಾಗಿ ಬಳಸಬೇಕು ಎಂದು ಬುದ್ಧಿ ಹೇಳಿದೆ. ಪರೋಲ್ ಕಾಯ್ದೆಗೆ ಶೀಘ್ರ ತಿದ್ದುಪಡಿ ತರುವುದಾಗಿ ಮಹಾರಾಷ್ಟ್ರ ಗೃಹ ಸಚಿವರು ಹೇಳಿದ್ದಾರೆ. ಆ ತಿದ್ದುಪಡಿ ಬರುವುದರೊಳಗೆ ಮುನ್ನಾ ಭಾಯಿಯ ಶಿಕ್ಷೆಯ ಅವಧಿಯೂ ಮುಗಿದು ಹೋಗಬಹುದು!

## ಶರೋನ್ ಸೌಂದರ್ಯ



ಮೂರು ಗಂಡು ಮಕ್ಕಳ ತಾಯಿ ಶರೋನ್ ಸ್ಟೋನ್ ಇತ್ತೀಚೆಗೆ ಪತ್ರಿಕೆಯ ಮುಖಪುಟವೊಂದರಲ್ಲಿ ಹಳದಿ ಬಿಕಿನಿ ಧರಿಸಿ ರಾರಾಜಿಸಿದ್ದು ನೋಡಿ, ಹಾಲಿವುಡ್‌ನ ಹೈಕಳೆಲ್ಲಾ ಹೈರಾಣಾದವಂತೆ. 55ರ ಹರೆಯದ ಶರೋನ್ ಈಗಲೂ ಸುಂದರ ಯುವತಿಯಂತೆ ದೇಹಸೌಂದರ್ಯ ಕಾಪಾಡಿಕೊಂಡಿರುವುದು ಅಚ್ಚರಿಯ ವಿಷಯವೇ. ಆದರೆ ಶರೋನ್‌ಳ ಸೌಂದರ್ಯದ ವ್ಯಾಖ್ಯೆಯೇ ಬೇರೆ ಇದೆ ಎನ್ನುವುದು ಕುತೂಹಲಕರ ಸಂಗತಿ.

‘ವಯಸ್ಸು ಎನ್ನುವುದು ಕೇವಲ ಸಂಖ್ಯೆ ಮಾತ್ರ. ಅದಕ್ಕೂ ಸೌಂದರ್ಯಕ್ಕೂ ಸಂಬಂಧವಿಲ್ಲ. ಆದರೆ ಆಯಾ ವಯಸ್ಸಿನಲ್ಲೇ ಮಹಿಳೆ ಹೇಗಿರಬೇಕೋ ಹಾಗೆಯೇ ಇರಬೇಕು. ಯೌವನ ಇದ್ದರೆ ಮಾತ್ರ ಆಕರ್ಷಣೆ ಇರುತ್ತದೆ ಎನ್ನುವುದು ಸುಳ್ಳು’ ಎಂದು ಶರೋನ್ ಹೇಳಿದ್ದಾಳೆ. ಬೇಸಿಕ್ ಇನ್‌ಸ್ಟಿಂಕ್ಟ್ ಮತ್ತು ಕ್ಯಾಸಿನೋ ಸಿನಿಮಾಗಳಲ್ಲಿ ತನ್ನ ಸೆಕ್ಸೀ ನಟನೆಯಿಂದ ಮನೆ ಮಾತಾಗಿದ್ದ ಈ ಹಾಲಿವುಡ್ ನಟಿ ಈಗ ಹೀಗೆ ಸೌಂದರ್ಯದ ವ್ಯಾಖ್ಯಾನ ನಡೆಸಿರುವುದು ಅಭಿಮಾನಿಗಳಿಗೆ ಬೆರಗು ಹುಟ್ಟಿಸಿದೆ.

ಅಂದ ಹಾಗೆ ಶರೋನ್ ಪ್ಲಾಸ್ಟಿಕ್ ಸರ್ಜರಿಯ ಕಡುವಿರೋಧಿ. ‘ಮುಖಕ್ಕೆ ಅಥವಾ ದೇಹದ ಭಾಗಗಳಿಗೆ ಕತ್ತರಿ ಹಾಕಿಸಿಕೊಂಡು ಸೌಂದರ್ಯ ಹೆಚ್ಚಿಸಿಕೊಳ್ಳುವುದು ಮೂರ್ಖತನ. ನನ್ನನ್ನು ಹತ್ತಾರು ವೈದ್ಯರು ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳಲು ಒತ್ತಾಯಿಸಿದರೂ ನಾನು ಒಪ್ಪಿಲ್ಲ. 20ರ ಹರೆಯದಲ್ಲೇ ಮುಖ ಕುಯ್ಯಿಸಿಕೊಳ್ಳುವುದು ಇತ್ತೀಚಿನ ನಟಿಯರಿಗೆ ಫ್ಯಾಶನ್ ಆಗಿದೆ. ಸಾವಿರಾರು ಹೆಣ್ಣುಮಕ್ಕಳು ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡು ಒಂದೇ ತರಹದ ಮೂಗು, ಗಲ್ಲ, ತುಟಿ ಹೊಂದುವುದು ಎಂತಹ ಸೌಂದರ್ಯ?’ ಎಂದು ಶರೂನ್ ಪ್ರಶ್ನೆ ಮಾಡಿದ್ದಾಳೆ. ಹಾಲಿವುಡ್‌ನ ಜಗದೇಕ ಸುಂದರಿಯೇ ಈ ಪ್ರಶ್ನೆ ಕೇಳಿರುವಾಗ ಉತ್ತರಿಸುವುದು ಕಷ್ಟ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65